

ಡೇವಿಡ್ ಸಿಲ್ವಾ

ಕ್ರಿಸ್ಟಿಯಾನೊ ರೊನಾಲ್ಡೊ

ಪಾಲ್ ಡೆಬಾಲ

# ಫುಟ್‌ಬಾಲ್ ಪುಳಕಕ್ಕೆ ಕಾದು ನಿಂತಿದೆ ಲೋಕ

**ಜೂನ್ 14ರಿಂದ ಒಂದು ತಿಂಗಳು ರಷ್ಯಾದಲ್ಲಿ ನಡೆಯಲಿರುವ ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ರೋಮಾಂಚಕ ಕ್ಷಣಗಳನ್ನು ಕಣ್ತುಂಬಿಕೊಳ್ಳಲು ಅಭಿಮಾನಿಗಳು ತುದಿಗಾಲಲ್ಲಿ ಕಾಯುತ್ತಿದ್ದಾರೆ.**

■ ಪ್ರಮೋದ ಜಿ.ಕೆ.

ರಷ್ಯಾದಲ್ಲಿ ಜುಲೈ 15ರ ವರೆಗೆ ವಿಶ್ವ ಫುಟ್‌ಬಾಲ್ ಹಬ್ಬ. ಬ್ರೆಜಿಲ್ ತಂಡ ಈವರೆಗೆ ಐದು ಬಾರಿ ವಿಶ್ವಕಪ್ ಜಯಿಸಿದೆ. ಜರ್ಮನಿ ಮತ್ತು ಇಟಲಿ ತಂಡಗಳು ತಲಾ ಎರಡು ಬಾರಿ ಪ್ರಶಸ್ತಿ ಗೆದ್ದಿವೆ. ವಿಶ್ವ ಶ್ರೇಷ್ಠ ಆಟಗಾರರನ್ನು ಹೊಂದಿರುವ ಅರ್ಜೆಂಟೀನಾ ಹಾಗೂ ಉರುಗ್ವೆ ತಂಡಗಳು ಎರಡು ಸಲ ಚಾಂಪಿಯನ್ ಆಗಿವೆ. 2014ರಲ್ಲಿ ಅರ್ಜೆಂಟೀನಾವನ್ನು ಮಣಿಸಿ ಜರ್ಮನಿ ತಂಡ ಟ್ರೋಫಿ ಜಯಿಸಿತ್ತು.

1938ರ ನಂತರ ರಷ್ಯಾದಲ್ಲಿ ಆಯೋಜನೆಯಾಗಿರುವ ಎರಡನೇ ಟೂರ್ನಿ ಇದು. ಅಂದ ಹಾಗೆ ಈ ಸಲದ ಟೂರ್ನಿಯಲ್ಲಿ ಪ್ರೇಕ್ಷಕರ ಮನ ಗೆಲ್ಲಬಲ್ಲ ಸೂಪರ್ ತಾರೆಯರ ದೊಡ್ಡ ದಂಡೇ ಇದೆ.

### ಲಯೊನಲ್ ಮೆಸ್ಸಿ (ಅರ್ಜೆಂಟೀನಾ)

ಫುಟ್‌ಬಾಲ್ ದಿಗ್ಗಜ ಪೆಲೆ ಅವರಿಂದ ಮೆಚ್ಚುಗೆ ಪಡೆದಿರುವ ಮೆಸ್ಸಿ, ಸಾರ್ವಕಾಲಿಕ ಶ್ರೇಷ್ಠ ಆಟಗಾರರ ಪಟ್ಟಿಯಲ್ಲಿ ಮುಂಚೂಣಿಯಲ್ಲಿದ್ದಾನೆ. ಕ್ಲಬ್ ಟೂರ್ನಿಗಳಲ್ಲಿ ಬಾರ್ಸಿಲೊನಾ ಪ್ರತಿನಿಧಿಸುತ್ತಾನೆ. ಐದು ಬಾರಿ 'ಯುರೋಪಿಯನ್ ಗೋಲ್ಡನ್ ಶೂ' ಗೌರವ ಪಡೆದ ಖ್ಯಾತಿವಂತ.

ಅರ್ಜೆಂಟೀನಾ 2008ರ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಜಯಿಸಿತ್ತು. 2005ರಲ್ಲಿ 20 ವರ್ಷದ ಒಳಗಿನವರ ವಿಶ್ವಕಪ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡಿತ್ತು. ಆ ಎರಡೂ ಬಾರಿ ಮೆಸ್ಸಿ ತಂಡದಲ್ಲಿದ್ದರು. 30ರ ಹರೆಯದ ಈ ಫಾರ್ವರ್ಡ್ ಆಟಗಾರ, ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಒಟ್ಟು 64 ಗೋಲುಗಳನ್ನು ಬಾರಿಸಿದ್ದಾನೆ. ಅದರಲ್ಲಿ ವಿಶ್ವಕಪ್‌ನ ಅರ್ಹತಾ ಸುತ್ತಿನ ಪಂದ್ಯಗಳಲ್ಲಿ 21 ಮತ್ತು ಪ್ರಧಾನ ಹಂತದ ಹೋರಾಟದಲ್ಲಿ ಐದು ಗೋಲು ಕಲೆ ಹಾಕಿದ್ದಾನೆ. ಲಾಂಗ್ ಪಾಸ್‌ಗಳನ್ನು ನೀಡುವುದು, ಚೆಂಡು ಹೆಚ್ಚು ಹೊತ್ತು ತಮ್ಮ ಹಿಡಿತದಲ್ಲಿ ಇರುವಂತೆ ನೋಡಿಕೊಳ್ಳುವುದು, ಎದುರಾಳಿ ಆಟಗಾರನ ಪೈಪೋಟಿಗೆ ಪ್ರತಿತಂತ್ರ ರೂಪಿಸುವುದರಲ್ಲಿ ಮೆಸ್ಸಿ ನಿಸ್ಸೀಮ.

### ಕ್ರಿಶ್ಚಿಯಾನೊ ರೊನಾಲ್ಡೊ (ಪೋರ್ಚುಗಲ್)

ಫಾರ್ವರ್ಡ್ ಆಟಗಾರ ರೊನಾಲ್ಡೊ ಕ್ಲಬ್ ಟೂರ್ನಿಗಳಲ್ಲಿ ರಿಯಲ್ ಮ್ಯಾಡ್ರಿಡ್ ನ ಸೂಪರ್‌ಸ್ಟಾರ್.

ಮಿಡ್‌ಫೀಲ್ಡ್ ವಿಭಾಗದ ಬಲಭಾಗದಲ್ಲಿ ಸಾಂಪ್ರದಾಯಿಕ ವಿಂಗರ್ ಆಗಿಯೂ ಎದುರಾಳಿ ಆಟಗಾರರಲ್ಲಿ ನಡುಕ ಹುಟ್ಟಿಸಬಲ್ಲ ಸಾಮರ್ಥ್ಯ ಹೊಂದಿರುವ ರೊನಾಲ್ಡೊ ವೇಗ, ಚಾಣಾಕ್ಷತನ, ತಾಂತ್ರಿಕ ಕೌಶಲ, ಸ್ಟೆಪ್ ಓವರ್ಸ್ ಮತ್ತು ಡ್ರಿಬ್ಲಿಂಗ್‌ಗೆ ಹೆಸರುವಾಸಿ. ನಿಖರವಾಗಿ ಪೆನಾಲ್ಟಿ ಕಿಕ್ ಟೇಕರ್ ಆಗಿರುವ ಈತ, ರಕ್ಷಣಾ ವಿಭಾಗದಲ್ಲಿ ಭದ್ರಕೋಟೆ ಕಟ್ಟಬಲ್ಲ. ಕ್ಲಬ್ ಮತ್ತು ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ಸೆಂಟರ್ ಫಾರ್ವರ್ಡ್ ಕ್ಷೇತ್ರದಲ್ಲಿನ ಆಟ ಗಮನಾರ್ಹ. ಮೈದಾನದಲ್ಲಿದ್ದರೆ ರೊನಾಲ್ಡೊ ವೇಗ ಹೇಗಿರುತ್ತದೆ ಎನ್ನುವುದಕ್ಕೆ ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ಈತ ಗಳಿಸಿರುವ 81 ಗೋಲುಗಳೇ ಸಾಕ್ಷಿ. ಫಿಫಾ ವಿಶ್ವಕಪ್‌ನ ಅರ್ಹತಾ ಸುತ್ತಿನಲ್ಲಿ 30 ಮತ್ತು ಫೈನಲ್ ಪಂದ್ಯದಲ್ಲಿ ಮೂರು ಗೋಲುಗಳನ್ನು ಹೊಡೆದಿರುವುದು ಹೆಗ್ಗಳಿಕೆ.



ವಿನ್ಯಾಸ: ದಿಲ್